



ರೂಪವನ್ನು ಪಡೆದಿರುವ ಅವನ್ನು ನಾರಿಯರು ಧರಿಸುವ ಸೀರೆಯಿಂದಲೇ ಸಿದ್ಧಪಡಿಸಲಾಗಿದೆ. ಹಾಗಂತ ಈ ಸುಂದರವಾದ ಕಲೆ ವೃತ್ತಿನಿರತ ಕಲಾವಿದನಿಂದ ರೂಪ ಪಡೆದುಕೊಂಡಿದ್ದಲ್ಲ. ಈ ಸೀರೆಯ ಶೃಂಗಾರವು ಗ್ರಾಮೀಣ ಪ್ರದೇಶದ ಕೃಷಿಕರ ಕೈಚಳಕದಿಂದಲೇ ಅರಳುತ್ತದೆ.

ಸಾಮಾನ್ಯವಾಗಿ ಈ ವೈವಿಧ್ಯ ಸೀರೆಯ ಅಲಂಕಾರವು ಮದುವೆ, ಮುಂಜಿಗಳಂತಹ ಸಂಭ್ರಮದಲ್ಲಿ ಮಾತ್ರವೇ ಕಾಣಬಹುದು. ಹಾಗಂತ ಇನ್ನುಳಿದ ವಿಶೇಷ ದಿನಗಳಿಗೆ ಈ ವ್ಯವಸ್ಥೆ ನಿಷಿದ್ಧವೇನು ಅಲ್ಲಾ. ಊರಿನವರು ಬಂದು, ಆ ಮನೆಯವರಿಗೆ ಆಸಕ್ತಿಯಿದ್ದರೇ ಉಪನಯನವೋ, ಚೌಳವೋ (ಚೂಡಾಕರ್ಮ) ಇಂಥ ಕಾರ್ಯಗಳಿಗೂ ಸಹಾ ಮೇಲ್ಗಟ್ಟನ್ನು ಕಟ್ಟಿ, ಸೀರೆಯಿಂದ ವಿಭಿನ್ನವಾದ ರೂಪದಲ್ಲಿ ಶೃಂಗಾರ ಮಾಡಬಹುದು. ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಅವಿಭಕ್ತ ಕುಟುಂಬಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಿದ್ದರಿಂದ ಯಾವುದೇ ಕಾರ್ಯಕ್ಕಾದರೂ ಊರಿನವರು ಬಂದು ಕೈಜೋಡಿಸಿ, ಆಗಬೇಕಾದ ಕೆಲಸವನ್ನು ಯಾವುದೇ ಪ್ರತಿಫಲ ಬಯಸದೇ ಮಾಡುತ್ತಿದ್ದರು. ಅವರು ಆಸಕ್ತಿ, ಶ್ರದ್ಧೆ, ಛಲ, ಉತ್ಸಾಹ, ಪ್ರಾಮಾಣಿಕತೆಯಿಂದ ಹಾಗೂ ಅಷ್ಟೇ ಜವಾಬ್ದಾರಿಯಿಂದ ಮಾಡುತ್ತಾ ಇರುವುದರಿಂದಲೇ ಮದುವೆಯಂತಹ ದೊಡ್ಡ ಕಾರ್ಯಗಳಿಗೆ ನಾರಿಯರ ಸೀರೆಗಳೇ ವಿಶೇಷವಾಗಿ ಶೃಂಗಾರಗೊಂಡು ಶೋಭಿಸುತ್ತಿದ್ದವು. ಎಷ್ಟೋ ಸಂದರ್ಭಗಳಲ್ಲಿ ಈ ವಿನ್ಯಾಸ, ಆ ಕಲಾಕೃತಿ ಯಾರು ಮಾಡಿದ್ದು ಎಂದು ಕುತೂಹಲ, ಕಾಳಜಿಯಿಂದ ವಿಚಾರಣೆ ಮಾಡುವುದು ಇತ್ತು. ಆದರೆ ವಿಶಿಷ್ಟ ಸೀರೆ ಅಲಂಕಾರ ಈಗೀಗ ಮರೆಯಾಗುತ್ತಿದೆ.



## ಬದಲಾದ ಸಂಪ್ರದಾಯ

ಈ ಹೈಟೆಕ್ ಜೀವನಶೈಲಿಯಲ್ಲಿ ಹಳ್ಳಿಗಳಲ್ಲಿರುವ ಅವಿಭಕ್ತ ಕುಟುಂಬಗಳು ಈಗ ಆಲಿಕಲ್ಲಿನಂತೆ ಕರಗಿ ಹೋಗಿವೆ. ಇರುವ ಮನೆಗಳಲ್ಲಿಯೂ ಸಹಾ ಜನಸಂಖ್ಯೆ ವಿರಳವಾಗಿದೆ. ಇನ್ನು ಊರಿನಲ್ಲಿ ನಡೆಯುವ ಮದುವೆಯಂತಹ ದೊಡ್ಡ ಕಾರ್ಯಗಳ ತಯಾರಿಗೆ ಬರುವವರ ಸಂಖ್ಯೆಯೂ ಇಳಿಮುಖವಾಗಿದೆ. ಹೀಗೆ ಭಿನ್ನ ಭಿನ್ನ ಕಾರಣದಿಂದ ಗ್ರಾಮೀಣ ಪ್ರದೇಶ ಮದುವೆಗಳು ಆಧುನಿಕ ಸ್ಪರ್ಶ ಪಡೆದುಕೊಂಡಿವೆ. ಸೋಗೆಯ ಚಪ್ಪರದ ಬದಲಿಗೆ ಸಿದ್ಧವಾದ ಪೆಂಡಾಲ್ ಹಾಕಿಸುವ ಸಂಪ್ರದಾಯ ಬೆಳೆದುಕೊಂಡಿದೆ. ಜೊತೆಗೆ ಈಗೀಗ ಮದುವೆ, ಉಪನಯನ, ಚೂಡಾಕರ್ಮ... ಇಂಥ ಕಾರ್ಯಗಳು ದೇವಸ್ಥಾನ, ಕಲ್ಯಾಣ ಮಂಟಪಗಳಲ್ಲಿ ನಡೆಯುವುದೇ ಹೆಚ್ಚಾಗಿದೆ. ಹೀಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅಂದು ನಡೆಯುತ್ತಿದ್ದ ಸಂಭ್ರಮ, ವೈವಿಧ್ಯ, ಮೇಲ್ಗಟ್ಟಿನಂತಹ ಶೃಂಗಾರಗಳೆಲ್ಲಾ ಮರೆಯಾಗುತ್ತಿವೆ. ಮಾತ್ರವಲ್ಲ, ಅಪ್ಪಟ ಗ್ರಾಮೀಣ ಕಲೆ (ಕೃಷಿಕರ ಸೃಜನಶೀಲ ಕಲೆ) ಜನ ಸಾಮಾನ್ಯರಿಂದ ದೂರವಾಗಿರುವುದು ನಿಜಕ್ಕೂ ಬೇಸರದ ಸಂಗತಿ.

